**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.111/2023**

ದಿನಾಂಕಃ **15.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆ **1** ನೇ ಎದುರುದಾರರ ಪರ ಶ್ರೀ ಡಿಜಿಪಿ ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಟಿ ಜಿ ಡಿ ವಕೀಲರಿಂದಃ**-**</u>

ನಾನು ಅರ್ಜಿದಾರರ ಗ್ರಾಮಕ್ಕೆ ಸ್ಥಳ ತನಿಖೆಗೆ ಹೋಗಿದ್ದೇನು**.** ರಾಷ್ಟ್ರೀಯ ಹೆದ್ದಾರಿ **-48** ಹಾಲೇನಹಳ್ಳಿ ಗ್ರಾಮದಲ್ಲಿ ಹಾದು ಹೋಗಿರುತ್ತದೆ ಅಂದರೆ ಸರಿ**.** ಶಿರಾ ಟೌನ್ ಗೆ ಹಾಲೇನಹಳ್ಳಿ **10** ಕಿಮೀ ಅಂತರವಿರುತ್ತದೆ ಅಂದರೆ ಸರಿಯಲ್ಲ**.** ತುಮಕೂರು **-** ದಾವಣಗೆರೆ ರೈಲ್ವೆ ಪ್ರಾಜೆಕ್ಟ್ **,** ರಾಷ್ಟ್ರೀಯ ಹೆದ್ದಾರಿ **-48** ರಿಂದ ಅರ್ಧ ಕಿಮೀ ಅಂತರದಲ್ಲಿ ಹಾದು ಹೋಗುತ್ತದೆ ಅಂದರೆ ಸರಿಯಲ್ಲ**. 2** ಕಿಮೀ ಗೂ ಅಂತರ ಮೇಲ್ಪಟ್ಟಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ**.** ರಾಷ್ಟ್ರೀಯ ಹೆದ್ದಾರಿ **-48** ಅರ್ಧ ಕಿಮೀ ಅಂತರದಲ್ಲಿ ಹೋಗುತ್ತದೆಯಾದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ**.**

**2)** ಕಲಂ**.11(1)** ಅಧಿಸೂಚನೆಯ ಸಮಯದಲ್ಲಿ ಹಾಲೇನಹಳ್ಳಿಯಲ್ಲಿ **1** ಗುಂಟೆಗೆ **2** ಲಕ್ಷಕ್ಕಿಂತ ಹೆಚ್ಚಿನ ಬೆಲೆ ಬಾಳುತ್ತಿತ್ತು ಅಂದರೆ ಸರಿಯಲ್ಲ**.** ರಾಷ್ಟ್ರೀಯ ಹೆದ್ದಾರಿ ಹತ್ತಿರವಿರುವುದರಿಂದ ಅಲ್ಲಿ ಭೂಮಿಯ ಬೆಲೆ ಜಾಸ್ತಿ ಇದ್ದರು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ**.** ಅರ್ಜಿದಾರರ ಜಮೀನಿನಲ್ಲಿ ಇದ್ದ ಹೊಂಗೆ ಮರ**,** ಜಾಲಿ ಮರ**,** ಹೊಂಗೆ ಸಸಿ ಮತ್ತು ಕಲ್ಲು ಬಾವಿ ಇದ್ದು ಅದಕ್ಕೆ ಸರಿಯಾದ ಮೌಲ್ಯಮಾಪನ ತರಿಸಿಕೊಳ್ಳದೇ ಪರಿಹಾರವನ್ನು ನಿರ್ಧಾರ ಮಾಡಿದ್ದೀರಿ ಅಂದರೆ ಸರಿಯಲ್ಲ**.** ಯಾವುದೇ ಸ್ಥಳ ತನಿಖೆ ಮಾಡದೇ**,** ಅರ್ಜಿದಾರರು ಮರಗಳಿಗೆ ಮತ್ತು ಕಲ್ಲುಬಾವಿಗೆ ಯಾವುದೇ ಸರಿಯಾದ ಮೌಲ್ಯಮಾಪನ ತರಿಸಿಕೊಳ್ಳದೇ ಸರಿಯಾದ ಮೌಲ್ಯಮಾಪನ ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ**.** ಪರಿಹಾರದ ಹಣವನ್ನು ಕಡಿಮೆ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ**.**

**-** ಮರುವಿಚಾರಣೆ ಇಲ್ಲ**-**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು